# ಪದಬಂಧ




### ಎಡದಿಂದ ಬಲಕ್ಕೆ

1. ಅನ್ಯಾಯವನ್ನು ಸರಿಪಡಿಸಿದ ಅಂದಿನ ವಿಧಾನವನ್ನೇ ಇಂದಿಗೂ ಹೊಂದಿಸಬಹುದು 3
3. ಪರಿಣಾಮ ಕೆಡದಿರಲೆಂದು ಮಾಡಿದ್ದು ಈ ಬಗೆಯ ನಮಸ್ಕಾರ 3
4. ವ್ಯರ್ಥವಾದದ್ದನ್ನೆಲ್ಲ ಸಂಗ್ರಹಿಸುವುದು ಇದೆಂಥ ನಡವಳಿಕೆ? 3
6. ಪಶು ಸಂಗೋಪನೆಯಿಂದಲೇ ಮಾಡಿದ್ದು ಇಷ್ಟೂ ಗಳಿಕೆ 4
7. ಮಂದಿರದ ಮುಂದೆ ನಿಂತು ಕೂಗಿದ್ದೇ ಮತ್ತೆ ಮತ್ತೆ ಕೇಳಿಸುವ ವಿದ್ಯಮಾನ 4
9. ತಿಜೋರಿಯಲ್ಲಿ ಇದ್ದ ಎಲ್ಲವನ್ನೂ ಹೊರತೆಗೆದರೆ ಎಳ್ಳು ಹಾಕಿ ಕೈಮುಗಿದಂತೆಯೇ 4
11. ಪ್ರತಿಯೊಬ್ಬರೂ ಹಣ ಸಂದಾಯ ಮಾಡುವುದು ಅಲ್ಲಿನ ಪರಂಪರಾನುಗತ ರೂಢಿ 4
15. ಆಕೆ ರಾಣಿಯಷ್ಟೇ ಅಲ್ಲ ; ತುಂಬ ಚೆಲುವೆ ಕೂಡ 3
16. ಧನವಂತನಾದೊಡನೆ ರಾಕ್ಷಸನೂ ಆಗಿಹೋದನೇ? 3
17. ಎಲ್ಲರ ನಡುವಣ ಸಮಾನತೆಯನ್ನು ಕಂಡು ಭಾರೀ ಹಿಗ್ಗು, ಸಂತಸ 3

### ಮೇಲಿನಿಂದ ಕೆಳಕ್ಕೆ

1. ಅಮ್ಮನ ಮೇಲೂ ಗೌರವ ಇಲ್ಲದಂತೆ ಮಾಡಿತು ಆತನ ಅಧಿಕಾರದ ನಶೆ 3
2. ವಿನಾಯಕನ ಪರಮ ಭಕ್ತನಾಗಿದ್ದಾನೆ ಆ ಅನ್ಯ ದೇಶೀಯ 3
3. ಪ್ರಮದೆಯರೊಡನೆ ಅನುಚಿತವಾಗಿ ವರ್ತಿಸಿದ್ದು ಭಾರೀ ತಪ್ಪಾಯಿತು 3
5. ನಂತರದ್ದೇನಾದರೂ ಇರಲಿ, ಹೊಡೆದಾಟದಲ್ಲಿ ಸುರಿದಿದ್ದು ರಕ್ತ 3
6. ಸಂತನಿಗೂ ಜೊತೆಗೊಬ್ಬನಿದ್ದಾನೆ ಸ್ನೇಹಿತ 3
8. ನೀರಿನ ಕೊರತೆಯ ಬಗೆಗೆ ಯಾವ ಹೆದರಿಕೆಯೂ ಇಲ್ಲ 3
10. ವಜ್ರ ಹುಡುಕಲು ಹೋದವರಿಗೆ ಎದುರಾದ ಯಮ 3
12. ಭಾರತದಲ್ಲಿ ಪ್ರತಿ ದಿನವೂ ಸುಂದರ ಬೆಳಗು 3
13. ಮೂರೆಣಿಸುವುದರೊಳಗೆ ಎದುರಾಳಿಯನ್ನು ಸೋಲಿಸು 3
14. ಇಂಥ ಪರದೆಗೆ ಪ್ರಶಸ್ತಿಯನ್ನು ನೀಡುವುದೆಂದರೆ? 3

---

## 22–12–2022 ಉತ್ತರಗಳು

**ಎಡದಿಂದ ಬಲಕ್ಕೆ**

1. ಉದಾಸೀನ 3. ಅದುರು 4. ಕ್ಷಣಿಕ 6. ಸಮಪಾಲು 7. ಕಥಾನಕ 9. ರಸಾರುಹ 12. ಅವಸರ 14. ರಕಮ (=ಮಕರ ಹಿಂದುಮುಂದು) 15. ಮಸ್ತಕ 16. ದಳಪತಿ

**ಮೇಲಿನಿಂದ ಕೆಳಕ್ಕೆ**

1. ಉರುವಲು 2. ನಕ್ಷತ್ರಕ 3. ಅಧಮ 5. ಕದನ 6. ಸಡಗರ 8. ಕಳೇಬರ 10. ಸಾವಿರ 11. ಹಣಮದ 12. ಅನುಮತಿ 13. ಸಪ್ತಕ

ಪ್ರಶ್ನಾಂಕಣ

# ಆರ್ಕ್ಟಿಕ್‌ನಲ್ಲಿ ಅದೇನು ಹೊಸ ಆತಂಕ?

ಇದೀಗ ಹೀಗೊಂದು ಹೆದರಿಸುವ ಸುದ್ದಿ: ‘ಧರೆಯ ಆರ್ಕ್ಟಿಕ್ ಪ್ರದೇಶದ (ಎಂದರೆ, ಉತ್ತರ ಧ್ರುವವನ್ನು ಪರಿವರಿಸಿ 66 ಡಿಗ್ರಿ 30 ನಿಮಿಷ ಉತ್ತರ ಅಕ್ಷಾಂಶದವರೆಗೂ ಹರಡಿರುವ ಪ್ರದೇಶ; ಭೂಪಟ ನೋಡಿ) ನೆಲದ ಶಾಶ್ವತ ಹಿಮಹಾಸಿನಲ್ಲಿ (Permafrost) ಪ್ರಾಚೀನ ಕಾಲದಲ್ಲಿದ್ದು ಈಗ ಸಂಪೂರ್ಣ ಕಣ್ಮರೆಯಾಗಿರುವ ವೈರಸ್‌ಗಳು ಮತ್ತು ರೋಗಕಾರಕ ಬ್ಯಾಕ್ಟೀರಿಯಾಗಳು ಪತ್ತೆಯಾಗಿವೆ!

ವಿಸ್ಮಯ ಏನೆಂದರೆ, ಈಗ್ಗೆ 27,000 ವರ್ಷಗಳಿಂದ 48,500 ವರ್ಷಗಳ ಹಿಂದಿನ ಅವಧಿಯ ವಿವಿಧ ಕಾಲಘಟ್ಟಗಳಲ್ಲಿ ಆರ್ಕ್ಟಿಕ್‌ನ ಹಿಮಹಾಸುಗಳಲ್ಲಿ ಹುದುಗಿಹೋಗಿರುವ ಇಂಥವೆಲ್ಲ ರೋಗಕಾರಕ ಮೈಕ್ರೋಬ್‌ಗಳು ಈಗಲೂ ಜೀವಂತವಾಗಿಯೇ ಇವೆ! ಹಾಗೆಂದರೆ, ಅವಕ್ಕೆ ರೋಗಗಳನ್ನು ತರಬಲ್ಲ, ಹರಡಬಲ್ಲ ಸಾಮರ್ಥ್ಯ ಈಗಲೂ ಇದೆ ಎಂದೇ ಅರ್ಥ! ಭೂತಾಪದ ಹೆಚ್ಚಳದಿಂದಾಗಿ ಆರ್ಕ್ಟಿಕ್‌ನ ಹಿಮರಾಶಿಗಳೂ ಸೇರಿದಂತೆ (ಚಿತ್ರ 1, 2) ಧರೆಯ ಶಾಶ್ವತ ಹಿಮ ಸಾಮ್ರಾಜ್ಯಗಳೆಲ್ಲವೂ ಕರಗುತ್ತಿರುವಾಗ ಅವುಗಳೊಳಗಿನ ವೈರಸ್‌ಗಳು ಮತ್ತು ಬ್ಯಾಕ್ಟೀರಿಯಾಗಳೂ ಹೊರಕ್ಕೆ ಬರುತ್ತವೆ; ತಮ್ಮ ಚಟುವಟಿಕೆಗಳನ್ನು ಆರಂಭಿಸುತ್ತವೆ. ಅವುಗಳ ಪೈಕಿ ಪೂರ್ವಕಾಲಗಳಲ್ಲಿ ಪ್ರಾಣಿಗಳಿಗೂ ಮನುಷ್ಯರಿಗೂ ಪ್ರಾಣಹಾರಕ ಅಂಟು ಜಾಡ್ಯಗಳನ್ನು ಹರಡಿದ್ದು ಪ್ರಸ್ತುತ ಪತ್ತೆ ಇಲ್ಲದಂತಾಗಿರುವ ಮೈಕ್ರೋಬ್‌ಗಳೂ ಸೇರಿದ್ದರೆ?




ಹಾಗಿರುವ ಸಾಧ್ಯತೆ ಖಂಡಿತ ಇದೆ. ಏಕೆಂದರೆ, ಆರ್ಕ್ಟಿಕ್‌ಗೇ ಸೇರಿದ ಅಲಾಸ್ಕಾ, ಗ್ರೀನ್ ಲ್ಯಾಂಡ್, ಸೈಬೀರಿಯಾ ಇತ್ಯಾದಿ ಪ್ರದೇಶಗಳಲ್ಲೂ ನಾನಾ ಪ್ರಾಣಿಗಳು ಬಹುಕಾಲದಿಂದ ವಾಸಿಸುತ್ತಿವೆ; ಮನುಷ್ಯರೂ ಸಾವಿರಾರು ವರ್ಷಗಳಿಂದ ನೆಲೆಸಿದ್ದಾರೆ. ಆಗಿನಿಂದಲೂ ಗಂಭೀರ ಅಂಟು ಜಾಡ್ಯಗಳಿಂದ ಪೀಡಿತವಾಗಿ ಕುಸಿದು ಬಿದ್ದು ಮೃತವಾದ ಪ್ರಾಣಿಗಳು ಅಲ್ಲಲ್ಲೇ ನೆಲ ಸೇರಿವೆ; ಅದೇ ರೀತಿ ಮೃತರಾದ ಮನುಷ್ಯರನ್ನು ಅಲ್ಲಿನ ನೆಲದಲ್ಲಿಯೇ ಹೂಳಲಾಗಿದೆ. ನೆಲದ ಹಿಮದಲ್ಲಿ ಹುದುಗಿರುವ ಇಂಥವೆಲ್ಲ ನಿರ್ಜೀವ ಕಳೇಬರಗಳು ಹಿಮ ಕರಗಿದಂತೆ ಹೊರಕ್ಕೆ ತೆರೆದುಕೊಳ್ಳುತ್ತವೆ. ಅವುಗಳೊಳಗಿನ ನಾನಾ ವಿಧಗಳ ಅಪಾರ ರೋಗಕಾರಕ ಮೈಕ್ರೋಬ್‌ಗಳು ಗಾಳಿ, ನೀರುಗಳ ಮೂಲಕ ಎಲ್ಲೆಡೆ ಹರಡುತ್ತವೆ. ಹಾಗಾದಾಗ ಮನುಷ್ಯರೂ ಸೇರಿದಂತೆ ಈಗಿನ ಇಡೀ ಪ್ರಾಣಿ ಲೋಕವೇ ಪ್ರಸ್ತುತ ಪೂರ್ಣ ನಿರ್ಮೂಲವಾದಂತಿರುವ ಪ್ಲೇಗ್, ಸಿಡುಬುಗಳಂತಹ ಮಹಾಮಾರಿ ರೋಗಗಳ ವಿನಾಶಕ ಹಸ್ತಗಳಿಗೆ ಮತ್ತೆ ಸಿಲುಕುವಂತಾಗುತ್ತದೆ. ಆರ್ಕ್ಟಿಕ್‌ನ ಪ್ರಸ್ತುತ ಹೊಸ ಆತಂಕ ಇದೇ.

■ ಎನ್. ವಾಸುದೇವ್